ಮಾಡಿಲ್ಲ. ಹಾಗೆ ನರಬರಾಯಿ ಮಾಡದಿರುವಾಗ ಜನರೇ ಅರ್ಜಿ ಬರೆದುಕೊಟ್ಟರೆ ಅದನ್ನು ಅವರು ಮಂಜೂರುಮಾಡುತ್ತಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿದ್ಯುಚ್ಛಕ್ತಿಯನ್ನು ಕೇಳತಕ್ಕ ಜನರು ತಾವು ಅನುಸರಿಸಬೇಕಾಗಿರುವ ಕ್ರಮವನ್ನು ಸರಿಯಾಗಿ ಅನುಸರಿಸುತ್ತಿಲ್ಲವಾದುದರಿಂದ ಕೆಲಸಗಳು ನಿಧಾನವಾಗುತ್ತಿವೆ. ಅವರು ಮೊದಲು ತಾಲ್ಲೂಕು ಅಮಲ್ದಾರರಿಗೆ ಅರ್ಜಿ ಕೊಡಬೇಕು. ಅನಂತರ ಅದು ಜಿಲ್ಲಾಧಿಕಾರಿಗಳಿಂದ ಕೌಂಟರ್‌ಸೈನ್ ಆಗಿ ಬರಬೇಕು. ಹೀಗೆಲ್ಲ ಕೆಲವು ನಿಯಮಗಳಿವೆ.

Implementation of the Prevention of Animal Sacrifices Act.

Q.—539. **Sri T. HANUMIAH** (Challakere—Scheduled Castes).—

Will the Government be pleased to state :—

(*a*) when the prevention of Animal Sacrifices Act came into force in the State ;

(*b*) whether it has come to their notice that the practice of slaughtering animals before the deities in villages still continues;

(*c*) whether it has come to their notice that while worshipping the village deities animals are slaughtered without obtaining licence ?

A.—**Sri H. S. RUDRAPPA** (Minister for Agriculture).—

(*a*) With effect from 25th July 1948.

(*b*) No.

(*c*) No.

Extension of the Mysore Prevention of Cow Slaughter Act and the Mysore Prevention of Animal Sacrifices Act to Bellary District.

Q.—341. **Sri M. GANGAPPA** (Bellary).—

Will the Government be pleased to state :—

(*a*) the reasons for cancellation of the notification appointing 1st November 1956, as the date on which the two Acts, *viz.*, the Mysore Prevention of Cow Slaughter Act L of 1948 and the Mysore Prevention of Animal Sacrifices Act LI of 1948, would be extended to Bellary District;

(*b*) whether they are intending to extend the two Acts immediately to Bellary District even now ?

A.—**Sri H. S. RUDRAPPA** (Minister for Agriculture).—

(*a*) Representations were received that the extension of the operation of the two Acts may be postponed.

(*b*) The question is under consideration.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು 1948ನೇ ಜುಲೈ 25ನೇ ತಾರೀಖು ಎಂತ ಉತ್ತರ ಕೊಡುತ್ತಾ..

ಶ್ರೀ ಎಚ್. ಎಸ್. ರುದ್ರಪ್ಪ.—ಆ ತಾರೀಖು ಹಳೆಯ ಮೈಸೂರು ದೇಶಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಟಿ. ಹನುಮಯ್ಯ.—ಇಂಥ ಒಂದು ಕಾನೂನು ದೇಶದಲ್ಲಿ ಜಾರಿಯಲ್ಲಿದೆ ಎನ್ನತಕ್ಕ ವಿಚಾರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪಟೇಲ್ ಶಾನುಭೋಗರುಗಳಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ದೇಶಾದ್ಯಂತ ದಲ್ಲಿರತಕ್ಕ ಜನರಿಗೆಲ್ಲಾ ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಅನೇಕ ಗ್ರಾಮಗಳಲ್ಲಿ ಯಾವ ಲೈಸೆನ್ಸ್‌ವಗೈರೆಗಳೂ ಇಲ್ಲದೆ ಜಾತ್ರೆಗಳು ನಡೆಸಲ್ಪಡುತ್ತವೆ ಎಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಗೊತ್ತಿಲ್ಲ. Hon'ble Member also has not brought to our notice.

ಶ್ರೀ ಟಿ. ಹನುಮಯ್ಯ.—ಪೋಲೀಸಿನವರೇ ಗ್ರಾಮಗಳಿಗೆ ಹೋಗಿ ಲೈಸೆನ್ಸ್ ಇಲ್ಲದಿದ್ದರೂ ಜಾತ್ರೆಗಳನ್ನು ನಡೆಸುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಈ ಆಕ್ಟ್ ಪ್ರಕಾರ ಎಷ್ಟು ಜನರಮೇಲೆ ಅಪರಾಧ ಹಾಕಲಾಗಿತ್ತು ?

ಶ್ರೀ ಎಚ್. ಎಸ್. ರುದ್ರಪ್ಪ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪ್ರಾಣಿವಧೆ ಮಾಡಲು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡರೆ ಅಂಥವರಿಗೆ ಲೈಸೆನ್ಸನ್ನು ಮಂಜೂರು ಮಾಡಲಾಗುತ್ತದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಆಕ್ಟಿನಲ್ಲಿ ಲೈಸೆನ್ಸ್ ಕೊಡಲು ಅವಕಾಶವಿದ್ದರೆ ಕೊಡಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗೆ ಆಕ್ಟಿನಲ್ಲಿ ಅವಕಾಶವಿಲ್ಲವೆಂದು ಸರ್ಕಾರದವರು ಹೇಳುವುದಾದರೆ ಆಗ ಜನರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದಂತಾಗುವುದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಅಮಲ್ದಾರರುಗಳಿಗೂ ಮತ್ತು ಗ್ರಾಮಗಳಲ್ಲಿರತಕ್ಕ ಪಟೇಲ್-ಶಾನುಭೋಗರುಗಳಿಗೂ ಈ ಆಕ್ಟಿನ ವಿಚಾರವೇ ಗೊತ್ತಿಲ್ಲವೆಂಬ ಅಂಶ ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?

ಅಧ್ಯಕ್ಷರು.—ನೀವು ಈ ಸಭೆಯ ಡಿಗ್ನಿಟಿ, ಡೆಕೋರಂ, ಡೀಸೆಂಸಿಗಳೇನಿರುತ್ತವೆಂಬುದನ್ನು ನೋಡಿಕೊಂಡು ಪ್ರಶ್ನೆ ಕೇಳಬೇಕಾದದ್ದು ಅತ್ಯಗತ್ಯ. This is not fair to the House.

ಶ್ರೀ ಟಿ. ಹನುಮಯ್ಯ.—ಈಗಲಾದರೂ ತಾವು ಈ ಆಕ್ಟಿನಬಗ್ಗೆ ತಕ್ಕಷ್ಟು ಪ್ರಚಾರ ನಡೆಸಲು ಪ್ರತಿ ತಾಲ್ಲೂಕು ಅಮಲ್ದಾರರಿಗೂ ಮತ್ತು ಪಟೇಲ್ ಶ್ಯಾನುಭೋಗರುಗಳಿಗೂ ಒಂದು ಆರ್ಡರನ್ನು ಕಳಿಸುತ್ತೀರ?

ಶ್ರೀ ಎಚ್. ಎಸ್. ರುದ್ರಪ್ಪ.—ಇದಕ್ಕೆ ಅವಕಾಶವೇ ಇಲ್ಲ. ಏಕೆಂದರೆ ನಾವು ಈಗಾಗಲೇ ಸಾಕಷ್ಟು ಪ್ರಚಾರ ನಡೆಸಿ ಎಲ್ಲರಿಗೂ ಇದರ ಅನುಭವ ಬಂದಿದೆ. ಹಾಗೊಂದುವೇಳೆ ಅವಶ್ಯಕತೆಯಿದೆಯೆಂದು ಕಂಡು ಬಂದರೆ ಆಗ ನೋಡೋಣ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪ್ರಾಣಿವಧೆಯ ಕಾನೂನು ಎಂದು ಒಂದು ಕಾನೂನು ದೇಶದಲ್ಲಿ ಜಾರಿಯಲ್ಲಿದೆಯೇ?

Mr. SPEAKER.—How does this question arise? It is not proper for the Hon'ble Member to put such supplementaries.

Sri C. K. RAJAIAH SETTY.—Is there a police watch during jatras for the prevention of animal slaughter?

Sri H. S. RUDRAPPA.—Yes.

Sri C. K. RAJAIAH SETTY.—Has it come to the notice of the Government that in spite of the presence of the police animal slaughter is going on?

Sri H. S. RUDRAPPA.—It has not come to our notice. None of the Hon'ble Members has also brought to our notice.

Sri G. VENKATAI GOWDA.—May I know whether there is a provision for obtaining licence?

Sri H. S. RUDRAPPA.—I am not aware.

Sri G. VENKATAI GOWDA.—Does the Government propose to consider the question?

Sri H. S. RUDRAPPA.—We will consider.

Sri ANNARAO GANAMUKHI.—May I know the number of existing slaughter houses that have secured licence?

Sri H. S. RUDRAPPA.—Notice.

Sri ANNARAO GANAMUKHI.—May I know whether useless animals are licenced for sacrifice?

Sri H. S. RUDRAPPA.—Notice.

Business of the House.

Mr. SPEAKER.—I have to make a statement.

The last dates for the receipt of nominations for the election of members to the Senates of Mysore and Karnatak Universities are postponed and the revised calendar will be issued by the office shortly.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ನಾವು ಪ್ರಥಮಸಾರಿಗೆ ಇಲ್ಲಿ ಸಭೆ ಸೇರಿದಾಗ ಈ ಸಭೆಯ ಕಾರ್ಯಕಲಾಪಗಳು ಮಧ್ಯಾಹ್ನ 12 ಘಂಟೆಯಿಂದ ಸಾಯಂಕಾಲ 5 ಗಂಟೆಯವರೆಗೂ ನಡೆಸಲ್ಪಡುತ್ತಿದ್ದವು. ಆ ಬಳಿಕ ಅದನ್ನು ಬದಲಾಯಿಸಿ ಬೆಳಿಗ್ಗೆ $8\frac{1}{2}$ ಘಂಟೆಯಿಂದ $12\frac{1}{2}$ ಘಂಟೆಗಳವರೆಗೆ ಸಭೆಯನ್ನು ನಡೆಸುವುದಕ್ಕೆ ಪ್ರಾರಂಭವಾಯಿತು. ಕೆಲವು ದಿನಗಳನಂತರ ಆ ಪದ್ಧತಿಯೂ ಸಹ ಬದಲಾಗಿ ಈಗ ಮಧ್ಯಾನ್ಹ 2 ಘಂಟೆಯಿಂದ ರಾತ್ರಿ 7 ಘಂಟೆಯವರೆಗೆ ಸಭೆಯ ಕಾರ್ಯಕಲಾಪಗಳು ನಡೆಯಬಹುದೆಂದು ತೀರ್ಮಾನವಾಗಿದೆಯೆಂದು ಕೇಳುತ್ತಿದ್ದೇನೆ. ಹೀಗೆ ಕೇವಲ ಕೆಲವು ದಿನಗಳಲ್ಲೇ ಮೂರಾವರ್ತಿ ಕಾರ್ಯಕ್ರಮದ ಕಾಲದಲ್ಲಿ ಬದಲಾವಣೆ ಮಾಡಿದಂತಾಯಿತು. ಹೀಗೆ ಪದೇಪದೇ ಕಾಲವ್ಯತ್ಯಾಸ ಮಾಡತಕ್ಕದ್ದು ಸರಿಯಲ್ಲ. ಆದಪ್ರಯುಕ್ತ ಅಧ್ಯಕ್ಷರು ಈವಿಚಾರದಲ್ಲಿ ಯಾವುದಾದರೂ ಒಂದು ವೇಳೆಯನ್ನು ಖಚಿತವಾಗಿ ತೀರ್ಮಾನಮಾಡಿ—ಅದರಂತೆ ಈ ಸಭೆಯ ಕಾರ್ಯ ಕಲಾಪಗಳನ್ನು ನಡೆಸಬೇಕೆಂದು ನಾನು ಸೂಚಿಸುತ್ತೇವೆ.

ಅಧ್ಯಕ್ಷರು.—ಈ ಸಭೆಯ ಕಾರ್ಯಕಲಾಪಗಳು ಮೊದಲು ಮಧ್ಯಾನ್ಹ 12 ಘಂಟೆಯಿಂದ ಸಾಯಂಕಾಲ 5 ಘಂಟೆಗಳವರೆಗೂ ನಡೆಸಲ್ಪಡುತ್ತಿದ್ದವು. ಈಗ ನಾವು ಅದನ್ನು ಬದಲಾಯಿಸಿದ್ದೇವೆ. ಆದುದರಿಂದ ಆ ಹಿಂದಿನವೇಳೆ ಏನಿತ್ತು ಎಂಬ ಪ್ರಶ್ನೆಯನ್ನು ಈಗ ಎತ್ತಲು ಕಾರಣವೇ ಇಲ್ಲ. ಆದರೆ ನಾವೀಗ ಈ ಸಭೆಯ ಕಾರ್ಯಕ್ರಮದ ಅವಧಿಯನ್ನು ಮಧ್ಯಾನ್ಹ 2 ಘಂಟೆಯಿಂದ ರಾತ್ರಿ 7 ಘಂಟೆಯತನಕ ಇಟ್ಟುಕೊಳ್ಳೋಣವೆಂಬುದಾಗಿ ತೀರ್ಮಾನಮಾಡಿದ್ದೇವೆ. ಈ ವಿಚಾರ ಎಲ್ಲ ಮಾನ್ಯ ಸದಸ್ಯರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದರೆ ಇತ್ತೀಚೆಗೆ ಎಲ್ಲ ಮಾನ್ಯ ಸದಸ್ಯರೂ ಇಲ್ಲಿ ಚರ್ಚೆಗೆ ಬರತಕ್ಕ ವಿಚಾರಗಳಬಗ್ಗೆ ಮಾತನಾಡಲು ಅವರಿಗೆ ಸಾಕಷ್ಟು ಕಾಲಾವಕಾಶ ದೊರೆಯುತ್ತಿಲ್ಲವೆಂಬ ಕಾರಣಕ್ಕಾಗಿ ಈ ಸಭೆಯ ಕಾಲಾವಧಿಯನ್ನು ಅದಷ್ಟು ಜಾಸ್ತಿ ಇಟ್ಟುಕೊಳ್ಳಲು ಈರೀತಿ ಮಾಡಲಾಗಿದೆ. ಇದರಿಂದ ಎಲ್ಲ ಸದಸ್ಯರಿಗೂ ಮಾತನಾಡಲು ಸಾಕಷ್ಟು ಕಾಲಾವಕಾಶ ಸಿಕ್ಕಬಹುದೆಂದು ಹೀಗೆ ಮಾಡಲಾಯಿತು. ಈ ವಿಚಾರ ಶ್ರೀ ಮುಕ್ಕಣ್ಣಪ್ಪನವರಿಗೂ ಸಹ ಗೊತ್ತಿರಲೇಬೇಕು. ಆದರೆ ಇನ್ನು ಶನಿವಾರದದಿವಸ ಯಥಾಪ್ರಕಾರದಂತೆ ಬೆಳಿಗಿನ $8\frac{1}{2}$ ಘಂಟೆಯಿಂದ $12\frac{1}{2}$ ಘಂಟೆಗಳತನಕ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಲಾಗುತ್ತಿದೆ. ಈ ಏರ್ಪಾಡಿನಿಂದ ಯಾರಿಗೂ ಯಾವ ತೊಂದರೆಯೂ ಆಗಲಾರದೆಂದು ನಾನು ತಿಳಿಯುತ್ತೇನೆ. ಆದರೆ ಈ ಹಿಂದೆ ಶ್ರೀ ವೈ. ವೀರಪ್ಪನವರು 1 ಘಂಟೆಯಿಂದ 6 ಘಂಟೆಗಳವರೆಗೂ ಈ ಸಭೆಯ ಕಾರ್ಯಕಲಾಪಗಳನ್ನಿಟ್ಟುಕೊಳ್ಳಬಹುದೆಂದು ಹೇಳಿದ್ದರು. ಮತ್ತೆ ಕೆಲವರು 11 ಘಂಟೆಯಿಂದ 5 ಘಂಟೆಯವರೆಗೂ ನಡೆಸೋಣವೆಂದು ಹೇಳಿದ್ದರು. ಆದರೆ ಅದೆಲ್ಲ ಸರಿಯಲ್ಲವೆಂಬುದಾಗಿ ತೀರ್ಮಾನಮಾಡಿ ಈಗ ನಡೆಸುತ್ತಿರುವ ಪದ್ಧತಿಯನ್ನು ಅನುಸರಿಸೋಣವೆಂದು ಈ ಹಿಂದೆ ತೀರ್ಮಾನ ಮಾಡಿದ್ದಾರೆ. ಆದರೆ ತಾವೆಲ್ಲರೂ ಯಾವುದಾದರೂ